ಹತ್ತನೆಯ ಶತಮಾನದ ಶೈಲಿಯ ಬಗ್ಗೆ ಬರೆಯಬಹುದಾಗಿತ್ತು. ಆದರೆ, ಬರೆಯಲಿಲ್ಲ.' ಈ ನಡುವೆ ಅವರಿಗೆ ತೃಪ್ತಿ ಕೊಟ್ಟ ಪರೀಕ್ಷಾ ಬರಹಗಳೂ ಇವೆ: 'ನನ್ನ ಪ್ರೀತಿಯ 'ಟ್ರ್ಯಾಜಿಡಿ' ಪತ್ರಿಕೆಯಲ್ಲಿ ಕಿಂಗ್ ಲಿಯರ್—ಪ್ರೆಸೆಂಟೇಶನ್ ಆಫ್ ಗುಡ್ ಅಂಡ್ ಈವಿಲ್—ಈ ಪ್ರಶ್ನೆಗೆ ಚೆನ್ನಾಗಿಯೇ ಉತ್ತರಿಸಿದೆ... ನಾಲ್ಕು ಪ್ರಶ್ನೆಗಳನ್ನು ಸೊಗಸಾಗಿ ಉತ್ತರಿಸಿದೆ.' ಆದರೂ ಡಿ.ಆರ್. ಒಟ್ಟಾರೆಯಾಗಿ ಪರೀಕ್ಷೆಯಲ್ಲಿ ಎದುರಾಗುತ್ತಿದ್ದ ನೆನಪಿನ ಕೊರತೆಯನ್ನು ಬರಬರುತ್ತಾ ಮೀರಲೆತ್ನಿಸಿದ ರೀತಿಯನ್ನು ಅವರ ಪುಸ್ತಕಗಳು ಸೂಚಿಸುತ್ತವೆ. ಕನ್ನಡದ ದೊಡ್ಡ ಬರಹಗಾರರಾಗತೊಡಗಿದ ಮುಂದಿನ ಘಟ್ಟದಲ್ಲಿ ಅವರ ನೆನಪಿಗೆ ದಕ್ಕುತ್ತಿದ್ದ ಜಗತ್ತಿನ ಹಲವು ಮೂಲೆಗಳ ಪಠ್ಯಗಳು, ಅವರು ಮಾತಾಡುವಾಗ ಒದಗಿ ಬರುತ್ತಿದ್ದ ಉಲ್ಲೇಖಗಳು ನಿಜಕ್ಕೂ ಅಚ್ಚರಿ ಹುಟ್ಟಿಸುತ್ತವೆ.

ವಿಮರ್ಶೆ, ಸಿದ್ಧಾಂತಗಳ ನಡುವೆ ಕತೆ, ಕಾದಂಬರಿ ಬರೆಯುವ ಕಾತರವೂ ಡಿ.ಆರ್. ಅವರಲ್ಲಿ ಸುಳಿಯುತ್ತದೆ. ಮಿತ್ರ ವಾಸುದೇವಯ್ಯನವರ ಅನುಭವ ಕೇಳುತ್ತಿರುವಾಗ, 'ನನ್ನಲ್ಲಿ ಸೃಷ್ಟಿಸುವ ತಾಕತ್ತಿದ್ದರೆ ಈತ ಮಹಾಕೃತಿಯೊಂದರ ಮೂಲದ್ರವ್ಯವಾದಾನು' ಎನ್ನಿಸುತ್ತದೆ; ವಾಸುವಿನ ಮೂಲಕ 'ಬರೇ ಅವನ ಕತೆಯಲ್ಲ—ಊರಿನ ಕತೆ, ಅದರ ನೋವು, ನಲಿವನ್ನು ಬಿಡಿಸಬೇಕೆಂಬ ಛಲ ಕೂಡ ಇದೆ. ಆದರೆ, ಅದನ್ನು ಛಲ ಎನ್ನಲಾರೆ—ಅದಿಲ್ಲದಿದ್ದರೆ ಸಾಹಿತ್ಯ ಸೃಷ್ಟಿ ಸಾಧ್ಯವೇ ಇಲ್ಲ... [ಆ ಛಲ] ಬರುವ ತನಕ ಕಾಯುವುದೋ ಅಥವಾ ಕ್ರಿಯೆಯಲ್ಲಿಯೇ ರೂಢಿಸಿಕೊಳ್ಳುವುದೋ?' ಎಂದುಕೊಳ್ಳುವ ಡಿ.ಆರ್., ಪ್ರಾಯಶಃ ಆಗ ಬರೆಯಲಿದ್ದ ಕತೆಗಾಗಿ, 'ಮೊದಲ ಭಾಗ—ಊರಿನಲ್ಲುಂಟಾದ ವಿಚಿತ್ರ ಚಲನೆಗೆ ಹಿನ್ನೆಲೆ' ಎಂಬ ಟಿಪ್ಪಣಿಯನ್ನೂ ಬರೆಯುತ್ತಾರೆ. ಮುಂದೊಮ್ಮೆ, 'ಕಥೆಯ ಮೊದಲ ಭಾಗ ಮುಗಿಯಿತು... ಯಾವುದೋ ಕಥೆಯ ದಟ್ಟ ಛಾಯೆ ಕಾಣುತ್ತಿದೆ; ಅದನ್ನು ಕತ್ತರಿಸಿ ನಾಳೆಯಿಂದ ಹೊಸದನ್ನು ಸೃಷ್ಟಿಸಬೇಕು' ಎಂದು ತೀರ್ಮಾನಿಸುತ್ತಾರೆ. ಮುಂದೆ, 'ಆ ಕಥೆಯನ್ನು ಬರೆಯುವ ಪ್ರಯತ್ನ ಇಲ್ಲವೇ ಇಲ್ಲ. ಕಾರಣ ಮತ್ತೆ ಸಮಸ್ಯೆಗಳನ್ನು ಮುಂದು ಹಾಕುವ ಪ್ರವೃತ್ತಿ' ಎಂಬ ಶರಾ ಇದೆ. ಮುಂದೊಮ್ಮೆ ಕತೆಯೊಂದರ 'ಸ್ಥೂಲ ರೂಪುರೇಖೆಗಳನ್ನು—ಅಸ್ಥಿಪಂಜರದ ಕೆಲವು ಭಾಗಗಳನ್ನು ಬಿಡಿಸಿಟ್ಟಿದ್ದೇನೆ. ಆದರೆ, ನನಗಿರುವ ಕೆಲವು ಮೂಲಭೂತ ಸಮಸ್ಯೆಗಳಿಂದಾಗಿ ಬರೆಯಲಾಗಿಲ್ಲ' ಎಂದು ಬರೆಯುವ ಡಿ.ಆರ್.ಗೆ ಒಂದು ಸಲ 'ನಿಜವಾದ ಸೋಶಲಿಸ್ಟ್ ಕತೆಗಾರ ನಾನಾಗುತ್ತೇನೆಯೋ ಇಲ್ಲವೋ ನನಗಂತೂ ಅನುಮಾನ ಇದೆ' ಅನ್ನಿಸುತ್ತದೆ.

ಲಾರೆನ್ಸ್, ಹೆಮಿಂಗ್ವೆ, ಕಾರಂತ ಥರದ ಕಾದಂಬರಿಕಾರರು ಈ ತರುಣ ಬುದ್ಧಿಜೀವಿಯನ್ನು ಕತೆಯ ದಿಕ್ಕಿಗೆ ಒಯ್ದರೆ, ಆಲ್ಡಸ್ ಹಕ್ಸ್ಲಿ, ಗುನ್ನರ್ ಮಿರ್ಡಾಲ್, ಲುಕಾಚ್ಸ್, ಸಾರ್ತ್ರ್, ಕಾಡ್‌ವೆಲ್ ಥರದ ಚಿಂತಕರು ವಿಮರ್ಶೆ, ಸಿದ್ಧಾಂತಗಳೆಡೆಗೆ ಜಗ್ಗುತ್ತಿದ್ದರೇನೋ! 'ಜಾರ್ಜ್ ಆರ್ವೆಲ್... ಭಾಷೆ ಮತ್ತು ರಾಜಕೀಯದ ಬಗ್ಗೆ ಹೇಳಿದ ಅಭಿಪ್ರಾಯಗಳು ಯಾಕೋ ಇತ್ತೀಚೆಗೆ ಬಹಳ ತಟ್ಟುತ್ತಿವೆ... ಸ್ಪಷ್ಟ, ನೇರ ಆಲೋಚನೆಗಿಂತ ನನ್ನ ಮನಸ್ಸು ಸಮಷ್ಟಿ ಮತ್ತು ಅಮೂರ್ತ ಆಲೋಚನೆಯ ಕಡೆಗೇ ಹೆಚ್ಚು ವಾಲಿದೆ' ಎಂದು ಡಿ.ಆರ್. ಬರೆಯುತ್ತಾರೆ. 'ನನ್ನ ನೋವು, ನಲಿವು, ರೋಷ, ರೊಚ್ಚು ಎಲ್ಲವೂ ಸಾಹಿತ್ಯ ಸೃಷ್ಟಿಯ ಸಾಧನಗಳಾಗಲೀ, ಮೂಲದ್ರವ್ಯಗಳಾಗಲೀ ಆಗುತ್ತಿಲ್ಲ' ಎಂದುಕೊಳ್ಳುವ ಡಿ.ಆರ್.ಗೆ, 'ಅಸ್ಪೃಶ್ಯನಾಗಿದ್ದರೆ ನನ್ನ ಅನುಭವ, ಆಲೋಚನೆಗಳು ಹೇಗಿರುತ್ತಿದ್ದವು' ಎನ್ನಿಸುತ್ತದೆ. ಸಂಗೀತ, ಸಿನಿಮಾ, ನಾಟಕ ಎಲ್ಲವೂ ಡಿ.ಆರ್. ವಲಯದಲ್ಲಿ ಸೇರಿಕೊಳ್ಳತೊಡಗುತ್ತವೆ.

'ಸ್ಫೂರ್ತಿಗಾಗಿ ಕಾಯುವುದು ಸೋಮಾರಿಗಳ ಕೆಲಸ' ಎಂದುಕೊಳ್ಳುವ ಡಿ.ಆರ್.ಗೆ, 'ಒಳ್ಳೆಯ ಮಾನಸಿಕ ಸ್ಥಿತಿ ಇಲ್ಲದಿದ್ದರೆ ಬರೆಯುವ ಗದ್ಯವೂ ಕಚಡಾ' ಎನ್ನಿಸುತ್ತದೆ. ಸದಾ ಪುಸ್ತಕಗಳ ಸಂಗದಲ್ಲಿದ್ದರೂ ತಮ್ಮ ಓದು, ಬರಹಗಳಲ್ಲಿರುವ ಕೊರತೆ ಕುರಿತ ಅತೃಪ್ತಿ ಬೆಳೆಯುತ್ತಲೇ ಹೋಗುತ್ತದೆ: 'ಬೆಂಗಳೂರಿನಿಂದ ತಂದ ಯಾವ ಪುಸ್ತಕಗಳನ್ನೂ ಸೀರಿಯಸ್ಸಾಗಿ ಓದಲಿಲ್ಲ...'